ಹಾಳಾಗುವುದಿಲ್ಲ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಅಧ್ಯಕ್ಷರೆ, ನಮ್ಮದು ತಪ್ಪಾಗಿದೆ ನಾನು ಒಪ್ಪಿಕೊಳ್ಳುತ್ತೇನೆ. 1978 ರಿಂದ 2461 ಜನ ಅಪ್ರೆಂಟೀಸ್‌ಗಳನ್ನು ಸರ್ಕಾರಿ ಹುದ್ದೆಗೆ ತೆಗೆದುಕೊಂಡಿದ್ದೇವೆ. ಈಗ 5 ಸಾವಿರ ಅಪ್ರೆಂಟಿಸ್ ಇದ್ದಾರೆ. 1990 ರಿಂದ ನಾವು ಯಾರನ್ನೂ ಸಹ ಸರ್ಕಾರಿ ಹುದ್ದೆಗೆ ತೆಗೆದುಕೊಂಡಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದು 9 ಸಾವಿರಕ್ಕೆ ಮೀರಿದ ಸಂಖ್ಯೆ ಇತ್ತು. ಇವರು 7 ಸಾವಿರ ಕೊಟ್ಟಿದ್ದಾರೆ. ಶ್ರೇಷ್ಠ ನ್ಯಾಯಾಲಯಕ್ಕೆ ಎಲ್ಲರೂ ಹೋಗಿಲ್ಲ. ಕೆಲವರು ಕನ್ಸೆಂಟ್ ಕೊಟ್ಟಿದ್ದಾರೆ. ಅವರಿಗೂ ಕೂಡ ತಾವು ರೆಗ್ಯುಲರೈಸ್ ಮಾಡಿಲ್ಲ.ವೆಕೆನ್ಸಿ ಇದ್ದ ಕಡೆ ಅವರಿಗೆ ಪ್ರೋವೈಡ್ ಮಾಡಿಲ್ಲ. ನಮ್ಮನ್ನು ವಿಲೇಜ್ ಅಕೌಂಟೆಂಟ್ ಆಗಿ ಹಾಕಬೇಡಿ ನಮಗೆ ಎಫ್‌ಡಿಸಿ ಸ್ಕೇಲ್ ಕೊಡಿಯೆಂದು ಕೇಳಿದ್ದು ಬಿಟ್ಟರೆ ಬೇರೇನೂ ಇರಲಿಲ್ಲ. ಸರ್ಕಾರ ಇದನ್ನು ಕನ್ಸಿಡರ್ ಮಾಡಬಹುದಾಗಿತ್ತು. ಸಬ್‌ಜುಡೀಸ್ ಆಗುತ್ತದೆನ್ನುವ ಮಾತು ಇಟ್ಟುಕೊಂಡು ಎಷ್ಟು ದಿವಸ ಈ ಸಮಸ್ಯೆಯನ್ನು ಜ್ವಲಂತವಾಗಿ ಇಡುತ್ತೀರಿ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಸದಸ್ಯರು ಯಾವ ಪ್ರಶ್ನೆಯನ್ನು ಕೇಳಿದ್ದಾರೆ ಅದೇ ಪ್ರಶ್ನೆ ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥವಾಗಲಿಕ್ಕೆ ಇದೆ . ಅದು ಬೇಗನೆ ಒಂದೆರಡು ವಾರದಲ್ಲಿ ತೀರ್ಪು ಬರುತ್ತದೆ. ತೀರ್ಪು ಬಂದ ಕೂಡಲೇ ನಾವು ಇತ್ಯರ್ಥ ಮಾಡುತ್ತೇವೆ.

<u>ವಿಷಯ :- ಬೀಡಿ ಕಾರ್ಮಿಕರಿಗೆ ಮಜೂರಿಗಳನ್ನು ಹೆಚ್ಚಿಸುವುದು.</u>

Q:1254

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಬೀಡಿ ಮಾಲೀಕರು, ಬೀಡಿ ಗುತ್ತಿಗೆದಾರರು, ಹಾಗೂ ಬೀಡಿ ಕಾರ್ಮಿಕರೆಷ್ಟು? ತಾಲ್ಲೂಕುವಾರು ವಿವರ ನೀಡುವುದು.

ಆ) ದಕ್ಷಿಣ ಕನ್ನಡದಲ್ಲಿ ಈಗ ಚಾಲ್ತಿಯಲ್ಲಿರುವ ಬೀಡಿ ಮಜೂರಿ ಎಷ್ಟು ಹಾಗೂ ಈಗಿರುವ ಮಜೂರಿಯನ್ನು ಹೆಚ್ಚಿಸಲು ಸರ್ಕಾರ ಯೋಜಿಸಿದೆಯೇ?

ಇ) ಬೀಡಿ ಮಜೂರರಿಗೆ ಈಗ ಇರುವ ಸವಲತ್ತುಗಳು ಯಾವುವು? (ವಿವರ ನೀಡುವುದು)

ಈ) ಬೀಡಿ ಮಜೂರರಿಗೆ ಮಾಲೀಕರಿಂದ ಗುತ್ತಿಗೆದಾರರುಗಳಿಂದ ಅನ್ಯಾಯಗಳೇನಾದರೂ ಆಗುತ್ತಿರುವ ಬಗ್ಗೆ ಮನವಿಗಳು ಬಂದಿದೆಯೇ? (ವಿವರ ನೀಡುವುದು)

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೀಡಿ ಮಾಲೀಕರು, ಗುತ್ತಿಗೆದಾರರು ಹಾಗೂ ಕಾರ್ಮಿಕರ ವಿವರಗಳು ಈ ಕೆಳಕಂಡಂತೆ ಇದೆ :-

ತಾಲ್ಲೂಕು	ಮಾಲೀಕರ ಸಂಖ್ಯೆ	ಗುತ್ತಿಗೆದಾರರ ಸಂಖ್ಯೆ	ಕಾರ್ಮಿಕರ ಸಂಖ್ಯೆ
ಮಂಗಳೂರು	21	790	1,10,422
ಉಡುಪಿ	4	205	16,627
ಕುಂದಾಪುರ	-	10	3,500
ಕಾರ್ಕಳ	2	130	18,505
ಬಂಟ್ವಾಳ	18	686	42,260
ಬೆಳ್ತಂಗಡಿ	-	336	9,800
ಪುತ್ತೂರು	1	141	19,332
ಸುಳ್ಯ	-	11	1,141
ಒಟ್ಟು	46	2,309	2,21,587

ಆ) ರೂ. 23-47 ವೇತನ - 19.65
ತುಟ್ಟಿಭತ್ಯ - 3.82
ಸದ್ಯಕ್ಕೆ ವೇತನ ಪುನರ್ ಪರಿಷ್ಕರಿಸುವ ಪ್ರಸ್ತಾಪವಿರುವುದಿಲ್ಲ.

ಇ) 1. ಕನಿಷ್ಠ ವೇತನ
2. ಬೋನಸ್
3. ರಜಾ ಸಂಬಳ
4. ರಾಷ್ಟ್ರೀಯ ಮತ್ತು ಹಬ್ಬಗಳ ರಜೆಗಳು
5. ಕಾರ್ಮಿಕರ ಮತ್ತು ಅವರ ಕುಟುಂಬಗಳಿಗೆ ವೈದ್ಯಕೀಯ ಸೌಲಭ್ಯ
6. ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ
7. ವಸತಿ ಯೋಜನೆ

ಕೇಂದ್ರ ಕಲ್ಯಾಣ ಆಯುಕ್ತರವರಿಂದ.

ಈ) ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ : ಸನ್ಮಾನ್ಯ ಅಧ್ಯಕ್ಷರೇ, ಈ ಬೀಡಿ ಕಾರ್ಮಿಕರ ಮಜೂರಿ ಎಷ್ಟು ಎಂದು ಕೇಳಿದ್ದಕ್ಕೆ 19 ರೂಪಾಯಿ 65 ಪೈಸೆ, 3 ರೂಪಾಯಿ 82 ಪೈಸೆ, ಒಟ್ಟಿಗೆ 23 ರೂಪಾಯಿ 47 ಪೈಸೆ ಎಂದು ಹೇಳಿದ್ದಾರೆ. ಇವತ್ತು ಏನಾಗಿದೆ ಎಂದರೆ, ಎಲ್ಲ ಬೆಲೆಯೇರಿಕೆಯಿಂದಾಗಿ ಇದನ್ನು ಸ್ವಲ್ಪ ಹೆಚ್ಚಿಗೆ ಮಾಡಬೇಕೆಂದು ಅವರು ಧರಣಿ, ಮುಷ್ಕರ ಮಾಡುತ್ತಿದ್ದಾರೆ. ಹಾಗೇನಾದರೂ ಹೆಚ್ಚು ಮಾಡುವಂಥ ಆಲೋಚನೆ ಮಂತ್ರಿಗಳಿಗೆ ಇದೆಯೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಅಧ್ಯಕ್ಷರೇ, ಅವರ ಕನಿಷ್ಠ ವೇತನ 28.10.91 ರಲ್ಲಿ ನಿಗದಿ ಆದಕಾರಣ ಈಗ ಮಿನಿಮಮ್ ವೇಜಸ್ಸನ್ನು ರಿವೈಸ್ ಮಾಡುವ ಪರಿಶೀಲನೆ ನಮ್ಮ ಸರ್ಕಾರದ ಮುಂದೆ ಯಾವುದೂ ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ : ಬೀಡಿ ಕಾರ್ಮಿಕರು ಬಹಳ ಚಾಸ್ತಿ ಇರುವಂತಾದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಅವರಿಗೆ ಬಹಳ ತೊಂದರೆ ಉಂಟು. ಈಗ 46 ಮಂದಿ ಮಾಲೀಕರು, ಗುತ್ತಿಗೆದಾರರು 2309, ಕಾರ್ಮಿಕರ ಸಂಖ್ಯೆ 2 ಲಕ್ಷ 21 ಸಾವಿರದ 587 ಎಂದು ಹೇಳಿದ್ದೀರಿ. ಈ ಗುತ್ತಿಗೆದಾರರಿಂದ ಕಾರ್ಮಿಕರಿಗೆ ತೊಂದರೆಯಾಗುತ್ತಿದೆಯೆ ಎಂದು ನಾನು ಕೇಳಿದ್ದಕ್ಕೆ, ಇಲ್ಲ ಎಂದು ಹೇಳಿದ್ದೀರಿ. ಆದರೆ ಅನೇಕ ಪತ್ರಿಕೆಗಳಲ್ಲಿ ಮತ್ತು ನಮಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ಗುತ್ತಿಗೆದಾರರು ಕೆಲವರಿಗೆ ಬೇಕಾದಷ್ಟು ಉಪದ್ರವವನ್ನು ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಅವರು ಏನಾದರೂ ಕಾರ್ಮಿಕರಿಗೆ ಈ ರೀತಿ ಉಪದ್ರವ ಕೊಡುವುದಿದ್ದರೆ ಅದನ್ನು ತಪ್ಪಿಸಿ ಅವರಿಗೆ ಉಪಕಾರ ಮಾಡುವಂಥ ಕಾರ್ಯಕ್ರಮ ಏನಾದರೂ ಮಾಡುತ್ತೀರಾ ಸ್ವಾಮಿ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಅಧ್ಯಕ್ಷರೇ, ಯಾವ ರೀತಿಯಲ್ಲಿ ಕಾರ್ಮಿಕರಿಗೆ ಉಪದ್ರವವಾದರೆ, ನಮಗೆ ದೂರು ಬಂದರೆ ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

<u>ತಡೆಹಿಡಿಯಲಾದ ಪ್ರಶ್ನೆಗಳು</u>

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, 130ನೇ ಸಂಖ್ಯೆಯ ಪ್ರಶ್ನೆಯನ್ನು ಗ್ರಾಮಾಭಿವೃದ್ಧಿ ಮಂತ್ರಿಗಳನ್ನು ಕೇಳುತ್ತೇನೆ.

ಅಧ್ಯಕ್ಷರು : ಇದಕ್ಕೆ ಉತ್ತರವನ್ನು ನಗರಾಭಿವೃದ್ಧಿ ಮಂತ್ರಿಗಳು ಕೊಡುತ್ತಾರೆ.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿ) : ನಾನು ಕಾನ್‌ಫರೆನ್ಸಿಗೆ ಹೋಗಿದ್ದೆ. ನಿನ್ನೆ ತಾನೆ ಬಂದೆ. ನಾನು ತಮಗೆ ಕಾಗದವನ್ನು ಕಳಿಸಿದ್ದೆ.

ಅಧ್ಯಕ್ಷರು : ಇದು ಹೆಲ್ಡ್ ಓವರ್ ಆಗಿದ್ದ ಪ್ರಶ್ನೆ.

ಶ್ರೀ ಚೌಡರೆಡ್ಡಿ : ನಾನು ಬೇರೆಯವರಿಗೆ ಹೇಳಿಬಿಟ್ಟು ಕಾನ್‌ಫರೆನ್ಸಿಗೆ ಹೋಗಿದ್ದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಸರ್ಕಾರದ ವರ್ತನೆ ತಮಗಾದರೂ ಸರಿಕಾಣುತ್ತದೆಯೆ? ಈ ರೀತಿ ಮುಂದೂಡುವ ಪ್ರಶ್ನೆಗಳಿಗೂ ಉತ್ತರ ಬರುವುದಿಲ್ಲ ಎಂದರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ : ನನ್ನ ನಾಲ್ಕು ಪ್ರಶ್ನೆಗಳಿಗೆ ಇದುವರೆಗೂ ಉತ್ತರ ಕೊಡುವುದಕ್ಕೆ ಆಗಿಲ್ಲ. ಸರ್ಕಾರ ಏನು ಕೆಲಸ ಮಾಡುತ್ತಿದೆ?

ಶ್ರೀ ಬಿ. ಹೆಚ್. ಬನ್ನಿಕೋಡ್ : ಮುಂದಿನ ಸಾಲಿನಲ್ಲಿ ಒಬ್ಬರಾದರೂ ಕ್ಯಾಬಿನೇಟ್ ಮಂತ್ರಿಗಳು ಇಲ್ಲ. ಉತ್ತರ ಕೊಡಲಿಕ್ಕೆ ಸಚಿವರು ನೋಡಿ, ಹುಡುಕಾಡುತ್ತಿದ್ದಾರೆ.